


‘ಮದುವೆಗಳು ಸ್ವರ್ಗದಲ್ಲಿ ರೂಪುಗೊಳ್ಳುತ್ತವೆ’ ಎನ್ನುವುದೊಂದು ಜನಪ್ರಿಯ ಮಾತು. ಆದರೆ ಅದೀಗ ಹಳೆಯದಾಗಿದೆ. ಇಪ್ಪತ್ತೊಂದನೆ ಶತಮಾನದ ಮದುವೆಗಳು ಶುಭ ಮುಹೂರ್ತದಲ್ಲಿ ಸ್ವರ್ಗವೇ ಧರಗಿಳಿದಂತಹ  ಸಮಾರಂಭಗಳಲ್ಲಿ ನಡೆಯುತ್ತವೆ. ಆದರೆ ದಂಪತಿಗಳ ಮುಂದಿನ ಜೀವನ ಸರ್ವಜ್ಞ ವಚನದ ಸ್ವರ್ಗಕ್ಕೆ ಕಿಚ್ಚುಹಚ್ಚಿದಂತೆ ಇರುವ ಗ್ಯಾರಂಟಿ ಇಲ್ಲ.

ಅಪ್ಪ ಅಮ್ಮ ಮತ್ತು ಮಗಳು ನನ್ನೆದುರು ಕುಳಿತಿದ್ದರು. ಮಗಳ ಹೆಸರು ಭೂಮಿ ಎಂದಿಟ್ಟುಕೊಳ್ಳೋಣ. ಭೂಮಿಗೆ ಭುವನ್ ಜೊತೆ ಮದುವೆಯಾಗಿ 5 ತಿಂಗಳಾಗಿತ್ತು. ಅವಳು ಆಗಲೇ ಮೂರು ತಿಂಗಳ ಗರ್ಭಿಣಿ ಕೂಡ. ದಂಪತಿ ವಿದ್ಯಾವಂತರು ಮತ್ತು ಇಬ್ಬರ ಒಪ್ಪಿಗೆಯಿಂದಲೇ ಮದುವೆಯಾಗಿತ್ತು. ನಿಶ್ಚಿತಾರ್ಥವಾದ ಮೇಲೆ ಮದುವೆಗೆ ನಾಲ್ಕು ತಿಂಗಳ ಸಮಯವಿದ್ದಾಗ ಇಬ್ಬರ ನಡುವೆ ಕರೆ ಸಂದೇಶಗಳ ವಿನಿಮಯವಾಗುತ್ತಿತ್ತು. ಹಾಗಿದ್ದರೂ ಮಧುಚಂದ್ರಕ್ಕೆ ತೆರಳುವಷ್ಟರಲ್ಲಿಯೇ ಇಬ್ಬರ ನಡುವೆ ಬಿರುಕು ಕಾಣಿಸಿಕೊಂಡಿತ್ತು.

‘ಭುವನ್ ನನ್ನ ಭಾವನೆಗಳಿಗೆ, ವ್ಯಕ್ತಿತ್ವಕ್ಕೆ ಬೆಲೆಯನ್ನೇ ಕೊಡುವುದಿಲ್ಲ, ನನ್ನನ್ನು ನಿಕೃಷ್ಟವಾಗಿ ನೋಡುತ್ತಾನೆ, ನಮ್ಮಿಬ್ಬರ ನಡುವಿನ ಆತ್ಮೀಯ ವಿಚಾರಗಳನ್ನು ಅತ್ತೆಯ ಮುಂದೆ ಹೇಳುತ್ತಾನೆ, ನನ್ನ ಜೊತೆ ನೇರವಾಗಿ ಮಾತನಾಡದೆ ಹಿರಿಯರ ಮೂಲಕ ನನ್ನ ಮೇಲೆ ಒತ್ತಡ ಹೇರುತ್ತಾನೆ’– ಇವು ಭೂಮಿಯ ಅನಿಸಿಕೆಗಳು. ‘ಅಯ್ಯೋ.. ಗಂಡ– ಹೆಂಡತಿ ಮಧ್ಯೆ ಇವೆಲ್ಲಾ ಇರೋದೇ ಅಲ್ವಾ ಸಾರ್, ಸುಧಾರಿಸಿಕೊಂಡು ಹೊಂದಾಣಿಕೆ ಮಾಡಿಕೊಂಡು ಹೋಗಬೇಕು. ಉಣ್ಣೋದಕ್ಕೆ ಉಡೋದಕ್ಕೆ ಕೊರತೆ ಇಲ್ಲ. ಒಳ್ಳೆ ಮನೆತನ, ಒಳ್ಳೆ ಹುಡುಗ, ಇನ್ನೇನು ಬೇಕು ಹೇಳಿ. ನಮ್ಮ ಕಾಲದಲ್ಲಿ ಇದಕ್ಕಿಂತ ಹೆಚ್ಚಿನ ಕಷ್ಟ ಇದ್ದಾಗಲೂ ನಾವೆಲ್ಲಾ ಸಂಸಾರ ಮಾಡಿಕೊಂಡು ಬಂದಿದ್ದೇವಲ್ಲವೇ. ಇವಳು ಈಗಾಗಲೇ ಗರ್ಭಿಣಿ ಕೂಡ. ವಿಚ್ಛೇದನ ಅಂತೆಲ್ಲಾ ಮುಂದುವರೆದರೆ ಮಗುವನ್ನು ಇಟ್ಟುಕೊಂಡು ಒಬ್ಬಳೇ ನಿಭಾಯಿಸುವುದು ಸಾಧ್ಯವಿಲ್ಲ ಅಂತ ಹೇಳಿದರೆ ಅರ್ಥ ಮಾಡ್ಕೋತಾ ಇಲ್ಲ. ನೀವೇ ಬುದ್ಧಿ ಹೇಳಿ ಸಾರ್’ ಎನ್ನುವುದು ತಾಯಿಯ ಅಳಲು. ಮೌನವಾಗಿ ಕುಳಿತಿದ್ದ ತಂದೆ ಆಗಾಗ ತಲೆಯಾಡಿಸುತ್ತಾ ಹೆಂಡತಿಯ ಮಾತಿಗೆ ಒಪ್ಪಿಗೆ ಸೂಚಿಸುತ್ತಿದ್ದರು. ತಾನೊಬ್ಬಳೇ ದುಡಿದು ಮಗುವನ್ನು ನೋಡಿಕೊಳ್ಳುತ್ತೇನೆ, ಆದರೆ ಭುವನ್ ಜೊತೆ ಜೀವನ ಸಾಧ್ಯವೇ ಇಲ್ಲ– ಎನ್ನುವುದು ಭೂಮಿಯ ಸ್ಪಷ್ಟವಾದ ಮಾತು. ಭುವನ್ ಜೊತೆ ಚರ್ಚೆ ಮಾಡಿ ಇಬ್ಬರೂ ದಾಂಪತ್ಯ ಚಿಕಿತ್ಸೆಗೆ ಬರುವುದು ಸಾಧ್ಯವೇ ಎಂದು ಯೋಚಿಸಲು ಭೂಮಿಗೆ ಸೂಚಿಸುವಷ್ಟರಲ್ಲಿ ಸಮಯವಾಗಿತ್ತು.

## ತಲೆಮಾರಿನ ಅಂತರ

ಮೇಲಿನ ಘಟನೆ ಬಹಳ ಅಪರೂಪದ್ದು ಎಂದುಕೊಳ್ಳುವಂತಿಲ್ಲ. ಭೂಮಿ